Regd No M 1299 33 ನೇ ವರ್ಷ ತಾ॥ 26—6—50

ಸತ್ಯವಾದಿ
SATYAVADI

ಸಂಪಾದಕರು: ಅರಮನೆ ಸಿರಸ್ತೆದಾರ್ ಎಂ. ಎ. ಸುಬ್ರಾಯರು | ಬಿಡಿ ಪ್ರತಿ 3 ಪೈ

ಕಮ್ಯುನಿಸ್ಟರ ಬಿಡುಗಡೆಗೆ ರಷ್ಯದ ಒತ್ತಾಯ

ಜಪಾನ್ ಕಮ್ಯುನಿಸ್ಟ್ ಪಕ್ಷದ 41 ಮುಂದಾಳುಗಳನ್ನು ಬೇಕಾಬಿಟ್ಟಿ ಬಿಡಿಸಿರ ಎಂದು ಜನ॥ ಮೆಕ್‌ಆರ್ಥರ್ ಸಾರಥ್ಯದ ಅಜ್ಞಾಧಿಯನ್ನು ಒಂದು ವಾರ ಹಿಂಪಡೆಯಬೇಕೆಂದು ರಷ್ಯ ಕೇಳಿದೆಯೆಂದು ಲಂಡನ್ ಪತ್ರಿಕೆ.

ಕಿಂಪು ವಿಮಾನ ನಿಲ್ದಾಣದಲ್ಲಿ ಅಮೇರಿಕನ್ ವಿಮಾನವೊಂದನ್ನು ಉತ್ತರ ಕೋರಿಯ ವಿಮಾನವೊಂದು ಘರ್ಷಿಸಿತೆಂದು ಟೋಕಿಯೋ ವರದಿ.

ಭಾರತ—ಪಾಕ್ ನಿರಾಶ್ರಿತ ಸ್ವತ್ತಿನ ಸಮಸ್ಯೆ ಪುನರ್ಪರಿಶೀಲಿಸಲ್ಪಡುವುದೆಂದು ಕರಾಚಿ ವರದಿ.

ಗೋವಾದಿಂದ ನಿಗ್ರೊ ಸೇನೆ ಹೋಗಬೇಕೆಂಬ ಕೇಳಿಕೆ ಎದ್ದಿದೆ.

ಪಶ್ಚಿಮ ಬಂಗಾಲದಲ್ಲಿ ಸಧ್ಯದಲ್ಲೇ ಅಲ್ಪ ಸಂಖ್ಯಾತ ಸಚಿವರೋವರನ್ನು ನೇಮಕ ಮಾಡುವ ವಾರ್ತೆ ಇದೆ. ಶ್ರೀಷ್ಣ ನ್ಯಾಯಾಲಯಕ್ಕೂ ಒರ್ವ ಅಲ್ಪ ಸಂಖ್ಯಾತರನ್ನು ನೇಮಿಸಲಾಗುವುದಂತೆ

ಪಂ॥ ನೆಹರು, ಪೂರ್ವ ಬಂಗಾಲದಿಂದ ಬಂದಿರುವ ನಿರಾಶ್ರಿತರ ಪುನರುಜ್ಜೀವನಕ್ಕಾಗಿ ಸಂಘಟಿತ ಸಭೆಯೊಂದುಬೇಕೆಂದು ನಿನ್ನೆ ಕಲ್ಕತ್ತಾದಲ್ಲಿ ತಿಳಿಸಿದ್ದಾರೆ.

ಶ್ರೀ ಶಾವರ್ಕರ ಬಿಡುಗಡೆಗೆ ಡಾ! ಖರೆ ನಾಗ್ಪುರದಲ್ಲಿ ಒತ್ತಾಯಿಸಿದ್ದಾರೆ.

ನಿನ್ನೆ ಪ್ರಾತಃಕಾಲದಿಂದ ದಕ್ಷಿಣ ಮತ್ತು ಉತ್ತರ ಕೋರಿಯಗಳಿಗೆ ಹೊಡೆದಾಟವಾರಂಭವಾಗಿದೆ ದ ಕೋರಿಯ ಅಮೇರಿಕ ಸಹಾಯ ಬೇಡಿದೆ. ವಿಶ್ವ ಸಂಸ್ಥೆಯು ಕೊರಿಯ ಸಮಿತಿ ಯುದ್ಧ ನಿಲ್ಲಲೆಂದು ಕೋರಿದೆ ಈ ಪ್ರಕರಣದ ಬಗ್ಗೆ ಲೇಕ್‌ಸಕ್ಸೆಸಿನಲ್ಲಿ ನಿನ್ನೆ ಸೇರಿದ್ದ ಭದ್ರತಾ ಮಂಡಲದ ವಿಶೇಷ ಸಭೆಗೆ ರಷ್ಯ ಒಂದಿಂಚಿಲ್ಲ.

3 ನೆ ಸಂಗತ್ಯಾಮಕ್ಕೆ ಅಮೇರಿಕ ಸಂಚು ಮಾಡುತ್ತಿದೆಯೆಂದು ಶ್ರೀ ಕರಂಜ್ಯ ಬ್ಲಿಟ್ಸ್‌ನಲ್ಲಿ ಬರೆದಿರುವರು.

ಭಂಗಾರ ಗಣಿ ಭಾರತೀಯರಿಗೆ

ಇಂದು ಮೈಸೂರು ಮಾಜಿ ಸಚಿವ ಶ್ರೀ ಎಂ. ಎ. ಶ್ರೀನಿವಾಸ್‌ರವರ ಲಂಡನ್ ಪ್ರವಾಸ. ಗಣಿ ಡೈರೆಕ್ಟರ್‌ಗಳಲ್ಲಿ ಅಪರೋರ್ವರು. ಭಾರತೀಯರ ಆಡಳಿತಕ್ಕೆ ಗಣಿ ಪಡೆಯುವ ಬಗ್ಗೆ ಅವರ ಪ್ರವಾಸ ಅವರ ಯಾತ್ರೆ ಯಶಸ್ವಿಯಾಗಲಿ.

ಸರ್ಕಾರ ಕಳಚಿತು

ನವಮಾಸ ತುಂಬಿದ ಸಂತರ ಮೊನ್ನೆ ಅವಿಶ್ವಾಸವನ್ನೆದುರಿಸಲಾರದೆ ಫ್ರಾನ್ಸಿನ ಜಾರ್ಜ್ ಬಿಡಾ ಸರ್ಕಾರ ಕಳಚಿ ಹೋಯಿತು.

ವ್ಯತ್ಯಾಸ ಪರಿಸ್ಥಿತಿ ಇಲ್ಲ

ಫ್ರಾಂಕ್ಸ್ ಬಿಡಾ ದೌಲತ್ ಮುಕ್ತಾಯವಾದುದಕ್ಕೂ ಷೂರ್ಮರವರ ಯೋಜನೆಗೂ ಏನೇನೂ ಸಂಬಂಧವಿಲ್ಲ ಎಂದು ಪ್ಯಾರಿಸ್ ನ್ಯೂಸ್ ತಿಳಿಸುತ್ತದೆ

ಬೇಗ ಆರೋಗ್ಯವಾಗಲಿ

ಡಾಕ್ಟರರ ಸಲಹೆಯನ್ನು ಮನ್ನಿಸಿ ಪ್ರಧಾನಿ ಶ್ರೀ ಕೆ. ಸಿ. ರೆಡ್ಡಿಗಳು ಊಟಿಯಿಂದ ತಿರುವಾಂಕೂರಿಗೆ ತೆರಳುವರೆಂದು ಗೊತ್ತಾಗಿದೆ. ಬೇಗ ಗುಣ ಪಡಿದು ಪ್ರಧಾನಿಗಳು ಮೈಸೂರು ಸೇರಲಿ.

ಸಂದರ್ಶನ ಕೃಪೆ

ಮೈಸೂರು ಮಹಾಪ್ರಭುಗಳು ಮೊನ್ನೆ ನಿವೃತ್ತ ಉಪ-ಸ್ಥಾನಪತಿಯವರಾದ ಶ್ರೀ ಕಸ್ತೂರಿರಾಜಚೆಟ್ಟ್ರರಿಗೆ ಸಂದರ್ಶನ ದಯಪಾಲಿಸಿದ್ದರು.

ಮೈಸೂರಿಗೆ ನೆಹರು

ಪಂ॥ ನೆಹರುರವರೇ ಬಹುಶಃ ಅಕ್ಟೋಬರಿನಲ್ಲಿ ಮೈಸೂರಿನ ಕೇಂದ್ರ ಆಹಾರ ಸಂಶೋಧನಾ ಸಂಸ್ಥೆಯ ಉದ್ಘಾಟನೋತ್ಸವ ನೆರವೇರಿಸುವರೆಂದು ಗೊತ್ತಾದೆ.

ನೂರು ವರ್ಷಗಳ ಮಹೋತ್ಸವ

ಈ ವರ್ಷ ಡಿಸೆಂಬರಿನಲ್ಲಿ ಮೈಸೂರು ಮಹಾರಾಜರವರ ಕಾಲೇಜಿನ ಮೇಲ್ಕಂಡ ಮಹೋತ್ಸವ ಜರುಗುವುದು.

* ಶಾಶ್ವತ ಶಾಂತಿ ಎಶ್ವದಲ್ಲುಂಟಾಗುವದೆಂದು ಅಮೇರಿಕಾ ಟ್ರೂಮನ್ ಹೇಳಿಕೆ

ಹಿಂದೂಕೋಡ್ ಪುನಃ ಬೇಡ

[ಸ್ವಂತ ಸುದ್ದಿಗಾರರಿಂದ ತಂತಿ]

ತೀರ್ಥಹಳ್ಳಿ, ಜೂನ್ 24

ಮುಂಬರುವ ಭಾರತ ಪಾರ್ಲಿಮೆಂಟ್ ಅಧಿವೇಶನದಲ್ಲಿ ಹಿಂದೂಕೋಡ್ ಮಸೂದೆಯನ್ನು ಪುನಃ ಮಂಡಿಸಕೂಡದು — ಎಂದು ದ್ವಾರಿಕಾ ಶ್ರೀ ಶಾರದಾ ಪೀಠದ ಜಗದ್ಗುರು ಶಂಕರಾಚಾರ್ಯ ಅಭಿನವ ಸಚ್ಚಿದಾನಂದ ತೀರ್ಥಜಿ ಮಹಾರಾಜ್‌ರವರು ರಾಷ್ಟ್ರಪತಿ ರಾಜೇಂದ್ರ ಬಾಬು, ಪ್ರಧಾನಿ ನೆಹರೂಜಿ ಮತ್ತು ಉಪ ಪ್ರಧಾನಿ ಸರ್ದಾರ್ ಪಟೇಲ್‌ರಿಗೆ ತಾರು ಕಳಿಸಿದ್ದಾರೆ.

ಗಂಡಾಂತರ ಕ್ರಮಗಳು ಜನಾಂಗ ಪ್ರಗತಿಗೆ ಸಹಾಯಕವಾಗಲಾರದು. ಅದು ಜನಗಳಲ್ಲಿ ಅತೃಪ್ತಿ, ಅಶಾಂತತೆಗೆ ಕಾರಣವಾಗುತ್ತದೆ — ಶ್ರೀ ಜಗದ್ಗುರುಗಳು ತಾರಿನಲ್ಲಿ ತಿಳಿಸಿದ್ದಾರೆ.

ಶ್ರೀ ಜಗದ್ಗುರು ಶಂಕರಾಚಾರ್ಯ ಸಂಸ್ಕೃತ ವಿಶ್ವವಿದ್ಯಾಲಯ ಕಾಲೇಜಿನಲ್ಲಿ ವೇದಾಂತ ಹಾಗೂ ಇತರ ಶಾಸ್ತ್ರಗಳ ಉನ್ನತ ಅಭ್ಯಾಸವನ್ನು ಮಾಡಿಸಲಾಗುವುದು; ಇದು ಸಧ್ಯದಲ್ಲಿಯೇ ಶ್ರೀ ಜಗದ್ಗುರುಗಳವರ ಮಠದಲ್ಲಿ ಸ್ಥಾಪಿಸಲ್ಪಡುವುದು.

ಗುಜರಾತ್‌ಗೆ ಶ್ರೀಶ್ರೀಗಳವರು ಸಧ್ಯದಲ್ಲೇ ತೆರಳುವರು.

ನಿಯಂತ್ರಣ ರದ್ದು

ಮೊನ್ನೆ ದಿವಸದಿಂದ ಕಾಗದ ನಿಯಂತ್ರಣ ಎಲ್ಲ ರದ್ದಾಯಿತು ಎಂದು ಪೆಹಲಿ ವಾರ್ತೆ.

ಮುಂದಾಳುಗಳಿಗೆ ಶಿಕ್ಷಣ

ಕಾರ್ಮಿಕ ಸಂಸ್ಥೆಗಳ ಅಧಿಕಾರ ಪಡೆಗಳಿಗೆ ಶಿಕ್ಷಣ ಕೊಡುವ ಒಗ್ಗೆ ಒಂದು ಯೋಜನೆಯನ್ನು ಹೈದರಾಬಾದ್ ಸರ್ಕಾರ ತಯಾರಿಸುತ್ತಿರುವ ವಾರ್ತೆ ಇದೆ.

ಸಚಿವ ಶ್ರೀ ಮುನ್ಷಿಗಳ ಪತ್ರವಿದ್ದೊಂದು ಸೇಟ್ ರಾವ್ ಕೃಷ್ಣ ದಾಲ್ಮಿಯವರಿಂದ ರೂ 300 ತೆಗೆದುಕೊಂಡು ಮೋಸ ಮಾಡಿದ ಅಗರವಾಲನೆಂಬ ತರುಣನ ಹೆಸರಿನಲ್ಲಿ ಪೋಲೀಸಿನವರು ನಿರಂತರವಾಗಿರುವರೆಂದು ದಿಲ್ಲಿ ವರದಿ.

ಅಪೇರಾ

ವೈಭವ 3 ನೇ ವಾರ

ಮಿಸ್ ಕುಮಾರಿ — ವೈಕಂ ಮಣಿ

ಪಾತ್ರವಹಿಸಿರುವ ಸುಂದರ ಚಿತ್ರ

(ಮಲಯಾಳಂ ಭಾಷೆ)

ನಲ್ಲತಂಗಾಳ್

ಮುಂದಿನ ವಿನೋದ

ಮಾಯಾವತಿ

ವುಡ್ ಲ್ಯಾಂಡ್ಸ್

23—6—50 ರಿಂದ

ಉಷಾ ಕಿರಣ್, ಅನೂಪ್ ಕುಮಾರ್

ಪೂರ್ಣಿಮಾ ವಾಸ್ತಿ ಅಭಿನಯಿಸಿರುವ

ಗೌನ
GAUNA

ಮನಮೋಹನ ಹಿಂದಿ ಚಿತ್ರ

ಪ್ರತಿ ದಿನ 3 ಪ್ರದರ್ಶನಗಳು

ರಣಜಿತ್ ಟಾಕೀಸಿನಲ್ಲಿ—

ಜನಪ್ರಿಯ 3 ನೇ ವಾರ

ವರಲಕ್ಷ್ಮಿ, ಪ್ರಕಾಶರಾವ್, ಶಿವರಾಮ್, ನಾರಾಯಣರಾವ್ ಅಭಿನಯಿಸಿರುವ

ಮಧುರ ಸಂಗೀತ, ನೃತ್ಯ, ವಿನೋದಗಳಿಂದ ಕೂಡಿದ ಸಾಮಾಜಿಕ ತೆಲಗು ಚಿತ್ರ

ಪ್ರಕಾಶ್ ಪ್ರೊಡಕ್ಷನ್ಸ್‌ರವರ

ಮೊದಟಿ ರಾತ್ರಿ
[First Night]

— ಸಕಲರೂ ನೋಡಬೇಕಾದ ಚಿತ್ರ —

ಪ್ರತಿ ದಿನ 3 ಆಟಗಳು

— A Prakash Pictures Release.

ಸಂಪುಟ ೮ ಪಂಚಿಕೆ ೪೪ ॥ ಶ್ರೀ ॥ ತಾ॥ 26-6-1950

— ಪ್ರ ಬೋ ಧ —

ಶ್ರೀ ದ್ವಾರಕಾ ಜಗದ್ಗುರು ಸಂಸ್ಥಾನ, ಮುಳುಬಾಗಿಲು,
ಶ್ರೀ ಕೃಷ್ಣಾನಂದಮಠಾಧೀಶ್ವರರಾದ
ಶ್ರೀ ಶ್ರೀ ಅಭಿನವ ಸಚ್ಚಿದಾನಂದತೀರ್ಥ ಸ್ವಾಮಿಗಳವರ
ಉದಾರಾಶ್ರಯದಲ್ಲಿ ಪ್ರಕಟವಾಗುತ್ತಿರುವ
— ಬೋಧಪ್ರದ ಸಪ್ತಾಹಿಕ ಪ್ರಕಟನಮಾಲೆ —
ಸಂಪಾದಕ ; ಗುಂಡ್ಮಿ ಮಹಾಬಲಭಟ್ಟ, ವೇದಾಂತಶಿರೋಮಣಿ ವೇಣಾಂತವಿಶಾರ
ಕಾರ್ಯದರ್ಶಿ, ಮೈ. ದೇ. ವ. ಸ್ವ. ಸಂಘ

.... ಸದ್ಗುರು ವಾಣಿ ....

[ಪ್ರೇಷಕ— ಗುರುಭಕ್ತ]

" ಭಗವನ್ನಾಮದಿಂದ ಜೀವನು ಶಿವನಾಗಿಬಿಡುವನು "

[ಮುಂದುವರಿದುದು]

ಕಂಬಳಿಯನ್ನು ನೂಲಿನ ರೂಪದಲ್ಲಿ ಮಾರ್ಪಡಿಸುವುದಕ್ಕಾಗಿ ಅದರ ಅಡ್ಡ ನೇರವಾದ ನೂಲೆಳೆಗಳ ಡೊಂಕನ್ನು ಹೇಗೆ ನಾಶಪಡಿಸಬೇಕಾಗುವುದೋ ಅದೇ ಪ್ರಕಾರ ಜೀವನನ್ನು ಶಿವರೂಪವಾಗಿ ಪರಿಣತಗೊಳಿಸಲೋಸುಗ ಅಹಂಕಾರದ ಋಜುವಕ್ರಭಾವವನ್ನು ನಾಶಗೊಳಿಸಬೇಕಾಗುವುದು. ನೂಲುಗಳ ಅಡ್ಡನೀಟ ತನವನ್ನು ನಾಶಗೊಳಿಸುವುದಕ್ಕಾಗಿ ಒಂದೊಂದು ನೂಲನ್ನೂ ಎಳೆದು ಬೇರೆ ಮಾಡಬೇಕಾಗುವಂತೆಯೇ ಜೀವನ ಅಹಂಕಾರವನ್ನು ನಾಶ ಮಾಡುವುದಕ್ಕಾಗಿ ತಿರುತಿರುಗಿ ನಾನು ಸ್ಮರಣ ಮಾಡಬೇಕಾಗುತ್ತದೆ. ಆದ್ದರಿಂದಲೇ ನಾವು ನಿಮಗೆ ಪುನಃ ಪುನಃ ನಾಮೋಚ್ಚಾರಣೆ ಮಾಡಲು ಹೇಳುತ್ತೇವೆ. ಇದರಲ್ಲಿ ನವೀನತೆಯೇನಿದೆಯೆಂದು ನೀನು ಕೇಳುತ್ತೀ, ಆದರೆ ನವೀನತೆಯಿಲ್ಲದಿದ್ದರೂ ಕೂಡ ನೀನು ಮಾಡುವುದಿಲ್ಲವೆಲ್ಲ. ಒಂದು ವೇಳೆ ಮಾಡುತ್ತಿದ್ದೆಯಾದರೆ ಇದರಲ್ಲಿ ನವೀನತೆಯೇನಿದೆಯೆಂದು ಕೇಳುತ್ತಿದ್ದಿಲ್ಲ. ಏಕೆಂದರೆ ಮಾಡುವುದರಿಂದ ಏನಾದರೊಂದು ನವೀನತೆಯು ಅವಶ್ಯವಾಗಿ ಗೊತ್ತಾಗಿಬಿಡುತ್ತದೆ. ಇದನ್ನು ಕೇಳಿ ಶಿಷ್ಯನು ಗುರುಗಳ ಚರಣಗಳನ್ನು ಹಿಡಿದುಕೊಂಡು ಕ್ಷಮೆ ಬೇಡಿದನು ಹಾಗೂ ಇಂದಿನಿಂದ ನಾನು ಸರ್ವದಾ ನಾಮಸ್ಮರಣ ಮಾಡುತ್ತಾ ಇರುವೆನೆಂದು ಪ್ರತಿಜ್ಞೆ ಮಾಡಿದನು.

ಸದ್ಗುರು ವಾಣಿ

— ೨ —

[ಪ್ರೇಷಕ : ' — ಗುರುಭಕ್ತ

" ಜೀವಾನುಗೋ ಗಚ್ಛತಿ ಧರ್ಮ ಏಕಃ "

ಶಿಷ್ಯ— ಭಗವನ್ ! ಲೋಕದಲ್ಲಿ ಮನುಷ್ಯನಿಗೆ ಯಥಾರ್ಥ ಬಂಧು ಯಾರು ?

ಗುರು— ವತ್ಸ ! ಲೋಕದಲ್ಲಿ ಮನುಷ್ಯನಿಗೆ ಯಥಾರ್ಥ ಬಂಧುವೆಂದರೆ ಧರ್ಮವೇ ಹೊರತು ಬೇರಾರೂ ಅಲ್ಲ. ಈ ವಿಷಯವನ್ನೊಂದು ದೃಷ್ಟಾಂತದಿಂದ ತಿಳಿಸುವೆ. ಕೇಳು. —

ಒಬ್ಬ ಮನುಷ್ಯನಿಗೆ ಮೂವರು ಗೆಳೆಯರಿದ್ದರು. ಅವರಲ್ಲಿ ಒಬ್ಬ ಗೆಳೆಯನು ಯಾವಾಗಲೂ ಆ ಮನುಷ್ಯನೊಟ್ಟಿಗೆ ಇರುತ್ತಿದ್ದನು. ಅವನು ಆತನೊಂದಿಗೆ ಚೆನ್ನಾಗಿ ಆಮೋದ ಪ್ರಮೋದ ನಡೆಸುತ್ತಾ, ಒಳ್ಳೊಳ್ಳೆಯ ಕೆಲಸಗಳಲ್ಲಿ ಮುಂದಾಳಾಗಿರುತ್ತಿದ್ದನು. ಆ ಗೆಳೆಯನಿಬ್ಬರೂ ಒಟ್ಟೊಟ್ಟಿಗೆ ತಿರುಗಾಡುತ್ತಿದ್ದರು. ಸಂಕ್ಷೇಪದಲ್ಲಿ ಹೇಳುವುದಾದರೆ ಇವರ ಮೈ ಎರಡಾಗಿದ್ದರೂ ಮನಸ್ಸು ಒಂದೇ ಆಗಿದ್ದಿತು. ಎರಡನೆಯ ಗೆಳೆಯನು ಮೂರುನಾಲ್ಕುದಿನಗಳಿಗೊಮ್ಮೆ ಆವರಿಗೆ ಸಿಗುತ್ತಾ ಇರುತ್ತಿದ್ದನು. ಆದರೆ ಪರಸ್ಪರ ಪ್ರೇಮವು ತುಂಬಿ ಇದ್ದಿತು. ಒಳ್ಳೊಳ್ಳೆಯ ಸಮಯದಲ್ಲಿ ಅವಶ್ಯವಾಗಿ ಉಪಸ್ಥಿತನಾಗುತ್ತಿದ್ದನು. ಮೂರನೆಯ ಬಂಧುವು ಯಾವಾಗಲೊಮ್ಮೆ ತಿಂಗಳಿಗೊಂದೆರಡು ಸಾರಿ ಆ ಜನರಿಗೆ ಭೆಟ್ಟಿಯಾಗುತ್ತಿದ್ದನು. ಅದೂ ಕರೆಯದೆ ಬರುತ್ತಿದ್ದಿಲ್ಲ. ಆ ಮೂರನೆಯ ಮಿತ್ರನು ಸರ್ವದಾ ಅವರೊಡನೆ ಇರಲು ಬಯಸುತ್ತಿದ್ದನಾದರೂ ಸಂಯೋಗವಶದಿಂದ ಹಾಗೆ ಮಾಡಲಾಗುತ್ತಿರಲಿಲ್ಲ. ಆ ಗೆಳೆಯನು ಎಲ್ಲ ವಿಷಯುಗಳಲ್ಲಿ ಸಹಮತನೂ ಇರುತ್ತಿರಲಿಲ್ಲ. ಅನುಚಿತ ಕಾರ್ಯವನ್ನೇನಾದರೂ ನೋಡಿದಲ್ಲಿ ಅದನ್ನು ಪ್ರತಿಪಾದಿಸುತ್ತಲೂ ಇದ್ದನು. ಆದ್ದರಿಂದಲೇ ಆ ಮನುಷ್ಯನು ಸರ್ವದಾ ಆ ಮೂರನೆಯ ಮಿತ್ರನನ್ನು ಕರೆಯುತ್ತಲೂ ಇದ್ದಿಲ್ಲ ಇರಲಿ, ಒಕ್ಕಾಲತ್ತಾಗಿ ಆ ಮನುಷ್ಯನ ಮೇಲೆ ಸಿವಿಲ್ ಮೊಕದ್ದಮೆಯೊಂದು ಬಂದೊದಗಿತು. ಕಛೇರಿಯಲ್ಲಿ ಹಾಜರಾಗಲು ಆತನಿಗೆ ಸಮನ್ ಬಂದಿತು. ಆ ವಿಪತ್ತನ್ನು ನೋಡಿ ಆ ಮನುಷ್ಯನು ತನ್ನ ನಿತ್ಯದ ಜೊತೆಗಾರ ಮಿತ್ರನೊಂದಿಗೆ ಹೇಳತೊಡಗಿದನು — " ಮಿತ್ರಾ ! ನನ್ನ ಮೇಲೆ ದೊಡ್ಡ ವಿಪತ್ತು ಬಂದಿದೆ, ನೀನು ನನ್ನ ಜತೆಗೆ ಕಛೇರಿಗೆ ಬಾ. ನನ್ನ ರಕ್ಷಣೆಗೆ ವ್ಯವಸ್ಥೆ ಮಾಡು " ಇದನ್ನು ಕೇಳಿ ಮೊದಲನೆಯ ಬಂಧು ನುಡಿದನು — ' ಮಿತ್ರಾ ! ಈ ಕಾರ್ಯವು ನನ್ನದಲ್ಲ, ನಾನು ಮೊಕದ್ದಮೆಗಳ ಕೆಲಸ ಅರಿಯೆನು, ಆದ್ದರಿಂದ ನಿನ್ನೊಂದಿಗೆ ಕಛೇರಿಗೆ ಬರಲಾರೆ, ಹಾಗೂ ನಿನ್ನ ರಕ್ಷಣೆಗಾಗಿ ಯಾವುದೇ ತರದ ಪ್ರಯತ್ನವನ್ನೂ ಮಾಡಲಾರೆ. ನಾನಾದರೊ ಕೇವಲ ನಿನ್ನ ಮನೆಯ ಮಿತ್ರನು, ಹೊರಗಡೆಗಲ್ಲ ' ಆ ಮನುಷ್ಯನು ಪ್ರಥಮ ಬಂಧುವಿನ ಸ್ಪಷ್ಟವಾದ ಉತ್ತರವನ್ನು ಕೇಳಿ, ನಿರಾಶನಾಗಿ, ಎರಡನೆಯ ಬಂಧುವಿನ ಹತ್ತಿರ ಸಹಾಯಕ್ಕೆ ಪ್ರಾರ್ಥಿಸಿಕೊಂಡನು. ಎರಡನೆಯ ಗೆಳೆಯನೆಂದನು — ' ಮಿತ್ರಾ ! ನಿನ್ನೊಂದಿಗೆ ಕಛೇರಿಗೆ ಬರುವಲ್ಲಿಕ್ಕೆ ನಾನು ಸಿದ್ಧನಿರುವೆ, ನಿನಗಾಗಿ ಇಷ್ಟು ಸ್ವಾರ್ಥತ್ಯಾಗವನ್ನೇನೂ ನಾನು ಅವಶ್ಯವಾಗಿ ಮಾಡಬಲ್ಲೆ; ಆದರೆ ಜಡ್ಜಿಗಳ ಹತ್ತಿರ ನಿಂತುಕೊಂಡು ಸಾಕ್ಷ್ಯ ಹೇಳಲಿಕ್ಕೆ ನಾನು ಸಿದ್ಧನಿಲ್ಲ. ಈ ಕೆಲಸ ನನ್ನದಲ್ಲ ' ದ್ವಿತೀಯ ಬಂಧುವಿನಿಂದಲೂ ಈ ಬಗೆಯ ನಿರಾಶಾಜನಕವಾದ ಉತ್ತರವನ್ನು ಕೇಳಿ ಕೊನೆಗೆ ಆತನು ತೃತೀಯ ಬಂಧುವನ್ನು ಕರೆಯಿಸಿಕೊಂಡು, ಆತನೊಂದಿಗೆ ತನ್ನ ಸಹಾಯಕ್ಕಾಗಿ ಪ್ರಾರ್ಥಿಸಿದನು. ಮೂರನೆಯ ಬಂಧುವು ಸಂತೈಸುತ್ತಾ ಹೇಳಿದನು — ' ತಮ್ಮಾ ! ನೀನು ಏನೂ ಚಿಂತೆ ಮಾಡಬಾರದು, ನಾನು ನಿನ್ನ ಜೊತೆಗಿರುವೆನು, ನೀನು ಎಲೆಲ್ಲಿಗೆ ಹೋಗುವಿಯೊ, ಅಲ್ಲಲ್ಲಿಗೆ ಬರಲು ನಾನು ಸಿದ್ಧನಿರುವೆನು ಇಷ್ಟು ದಿವಸಗಳ ಪರಿಗೆ ನೀನು ನನ್ನನ್ನು ಎಂದೂ ಅಗ್ರಹದಿಂದ ಕರೆಯಲಿಲ್ಲ; ಆದರೆ ಈಗ ನನ್ನ ಸಹಾಯವನ್ನು ಕೇಳುತ್ತೀಯಾದರೆ ನನಗೆ ಇನ್ನೇನೂ ಚಿಂತೆಯಿಲ್ಲ. ಯಥಾಶಕ್ತಿ ನಾನು ನಿನ್ನ ಸಲುವಾಗಿ ಜಡ್ಜಿಗಳೊಂದಿಗೆ ಪ್ರಾರ್ಥಿಸುವೆನು ಹಾಗೂ ಸಾಧ್ಯವಾದಷ್ಟು ನಿನಗೆ ಉಪಕಾರ ಮಾಡಲೆತ್ನಿಸುವೆನು ' ಇದನ್ನು ಕೇಳಿ ಆ ಮನುಷ್ಯನು ಸಂತೋಷಗೊಂಡು ನಿರ್ಭಯನಾಗಿ ಕಛೇರಿಗೆ ಹೋದನು. ಹಾಗೂ ಮೂರನೆಯ ಬಂಧುವಿನ ಸಹಾಯದಿಂದ ತನ್ನನ್ನು ಉಳಿಸಿಕೊಂಡನು.

ವತ್ಸಾ ! ನೀನು ಈ ಮೂರನೆಯ ಬಂಧುವನ್ನು ತಿಳಿಯಿಸಬೇಕು ಬಲ್ಲೆಯಾ ಈ ಮೂರನೆಯ ಗೆಳೆಯ ಯಾರೆಂದು ? ಪ್ರತಿಯೊಬ್ಬ ಮನುಷ್ಯನಿಗೆ ಮೂರು ಬಂಧುಗಳಿರುವರು ; ಹಣ, ಕುಟುಂಬ ಮತ್ತು ಧರ್ಮ. ಪ್ರಥಮ ಬಂಧುವು ಹಣ ಮನುಷ್ಯನ ಮೇಲೆ ಯಮರಾಜನ ' ಸಮನ್ ' ಬಂದಾಗ ಹಣವು ಸ್ಪಷ್ಟವಾಗಿ ಉತ್ತರಕೊಟ್ಟುಬಿಡುತ್ತದೆ — ' ಯಮರಾಜನ ಕಛೇರಿಯಿಂದ ನಿನಗೆ ಸಮನ್ ಬಂದಿದೆ; ಇನ್ನು ನೀನು ಹೋಗು ನಾನು ನಿನ್ನೊಟ್ಟಿಗೆ ಬರಲಾರೆ ನಾನಾದರೂ ನಿನ್ನ ಮನೆಯ ವಟ್ಟಿಗೆ ಬಂಧುವಾಗಿದ್ದೆ ನಿನ್ನೊಂದಿಗೆ ಯಮರಾಯನ ಕಛೇರಿಯ ವರೆಗೆ ಕಲಪಲು ನಾನು ಸಮರ್ಥನಲ್ಲ ' ಮನುಷ್ಯನ ದ್ವಿತೀಯ ಬಂಧುವೆಂದರೆ ಕುಟುಂಬ ; ಮೃತ್ಯು ವೇಳೆಯಲ್ಲಿ ಅದು ಹೀಳಿಬಿಡುತ್ತದೆ — ನಾನು ನಿನ್ನೊಟ್ಟಿಗೆ ಯಮರಾಯನ ಕಛೇರಿಯ ವರೆಗೆ ಒರಲಾರೆ ಆದರೆ ಮಸಣ (ಯಮದ್ವಾರ) ದ ವರೆಗೆ ಅವಶ್ಯವಾಗಿ ಬರಬಲ್ಲೆ ಅಧ್ಯ ಮುಂದೆ ಇಲ್ಲ '

— ಸಶೇಷ

ಮಂತ್ರಿಗಳೆಂದರೆ ಡ್ರೈವರರು

'ನಮ್ಮ ಮಂತ್ರಿಗಳೆಂದರೆ ಕಾರಿನ ಡ್ರೈವರಂತೆ. ಡ್ರೈವರನ ಮನಸ್ಸು ಕಲಕಿ ಹೋಯಿತೆಂದರೆ ಕಾರು ಡಿಕ್ಕಿ ಹೊಡೆಯುವ ಸಂಭವವಿರುತ್ತದೆ. ನಮ್ಮ ಮಂತ್ರಿಗಳ ಮನಸ್ಸು, ಟೀಕೆ, ಬುದ್ಧಿ ಮಾತು, ಟಿಪ್ಪಣಿಗಳಿಂದ ಕಲಕಿ ಅನಾಹುತವಾಗುವ ಸಂಭವವಿದೆ' ಎಂದು ಉದ್ದಿಮೆ-ಪೂರೈಕೆ ಮಂತ್ರಿಗಳಾದ ಶ್ರೀ ಮೆಹತಾಬರು ನೊನ್ನೆ ದಿಲ್ಲಿಯಲ್ಲಿ ನುಡಿದಿದ್ದಾರೆ.

೦ ೦

ಕಮ್ಯೂನಿಸ್ಟ ಜೂರಿ

ಅಮೇರಿಕಾದಲ್ಲಿ ಒಂದು ಕೆಳ ಕೋರ್ಟಿನಲ್ಲಿ ಜ್ಯೂರಿಯೆಂದು ನಿಯಮಿಸಲಾಗಿದ್ದ ಅಲಿಸ್ ರುಥ್ ಎಂಬಾಕೆಯನ್ನು ಆ ಕೋರ್ಟಿನ ಜಡ್ಜರು ಆಕೆ ಕಮ್ಯೂನಿಸ್ಟಳಿದ್ದಾಳೆಂದು ಆರೋಪವಿತ್ತು ತೆಗೆದಿದ್ದರು. ಆಕೆ ಮೇಲು ಕೋರ್ಟಿಗೆ ಈ ಒಗ್ಗೆ ದೂರು ಮೂಡಿದಳು. ಸ್ಪೆಷಲ್ ಕೋರ್ಟಿನಿಂದ 'ಕಮ್ಯೂನಿಸ್ಟು ಇರುವುದೇನೂ ಜೂರಿಯಾಗಲು ಬಂಧಕವಾಗದು' ಎಂದು ಹುಕುಮು ಕೊಟ್ಟರುತ್ತದೆಯಂತೆ.

೦ ೦

ಬ್ರಿಟಿಷ್ ಪಾರ್ಲಿವೆಂಟಿನಲ್ಲಿ

ಬ್ರಿಟಿಷು ಪಾರ್ಲಿಮೆಂಟಿನ ಸದಸ್ಯರಲ್ಲಿ ಮಜದೂರು ಪಕ್ಷದಲ್ಲಿಯು ಬೇರೆಬೇರೆ ತರಗತಿಯ 38 ಕಣಿಗಳನ್ನು, 21 ರೈಲ್ವೆ ಮಜದೂರರು, 40 ವಕೀಲರು, 22 ಶಾಲಾ ಮಾಸ್ತರರು, 31 ಟ್ರೇಡ್ ಯೂನಿಯನ್ ಅಧಿಕಾರಿಗಳು, ಮತ್ತು 23 ವೃತ್ತ ಪತ್ರಿಕೋದ್ಯೋಗಿಗಳು ಸದಸ್ಯರು ಇದ್ದು. ಟೋರಿ ಮತ್ತು ನ್ಯಾಷನಲ್ ಲಿಬರಲ್ ಪಕ್ಷದಲ್ಲಿ 124 ಸದಸ್ಯರು ಕಂಪೆನಿ ಡೈರೆಕ್ಟರರಿದ್ದು ಅವರ ಆಧಿಪತ್ಯದ ಕೆಳಗೆ 457 ಕಂಪೆನಿಗಳು ಇರುವಂತೆ.

೦ ೦

ಸಂಗೀತ ಪರೀಕ್ಷೆಗಳ ಫಲಿತಾಂಶ

ರಾಜಧಾನಿಯಲ್ಲಿ ಮೈಸೂರು ಸಹೋದರರಿಂದ ನಡೆಸಲ್ಪಡುತ್ತಲಿರುವ ಶ್ರೀ ವರಲಕ್ಷ್ಮೀ ಸಂಗೀತ ವಿದ್ಯಾಮಂದಿರದಿಂದ ಕಳೆದ ಮೇ ತಿಂಗಳಿನಲ್ಲಿ ನಡೆದ ಸಂಗೀತ ಪರೀಕ್ಷೆಗಳಿಗೆ ಕಳುಹಿಸಲ್ಪಟ್ಟ ವಿದ್ಯಾರ್ಥಿಗಳೆಲ್ಲರೂ ತೇರ್ಗಡೆಹೊಂದಿ ಮುಂದರವು ಶೇಕಡ 100 ರಷ್ಟು ಶುಭ ಫಲಿತಾಂಶವನ್ನು ಗಳಿಸಿದೆ.

ಪೋಬುಲ್ಲ ಖಾನ್ ಕೊಲೆ ಮೊಕದ್ದಮೆಯಲ್ಲಿ ಕಾಸಿಂ ರಜವಿ ಕರಾಚಿಯಿಂದ ಬರುವ ಗ್ರಾಹಕ.ಫೋನ್ ರಿಕಾರ್ಡೊಂದನ್ನು ಸಾಕ್ಷ್ಯವಾಗಿ ತೆಗೆದುಕೊಳ್ಳಬೇಕೆಂದು ತಿಳಿಸಿರುವರೆಂದು ನಿಕಂದರಾಬಾದಿನ ವರದಿ.

ಭಾರತ-ಪಾಕ್ ಗೋಧಿ ಒಪ್ಪಂದ ಇನ್ನೊಂದು ವಾರದಲ್ಲಿ ಕೈಗೂಡಿ ಭಾರತಕ್ಕೆ 3 ಲಕ್ಷ ಟನ್ ಗೋಧಿ ಬರಬಹುದೆಂದು ಕರಾಚಿ ವಾರ್ತೆ.

ದಕ್ಷಿಣ ಆಫ್ರಿಕಾ ಪ್ರಧಾನಿ ಡಾ|| ಮಲನ್‌ರವರ ಮನೆಗೆ ಬೆಂಕಿ ಬಿದ್ದು ಅವರ ಸಂಸಾರವನ್ನು ಸಂಕ್ಷಿಪ್ತಸಲಾಯಿತು.

ಪಂ|| ನೆಹರುವಿಗೆ ನಿನ್ನೆ ರಂಗೂನಿನಲ್ಲಿ ವೈಭವದ ಸ್ವಾಗತ ಸಿಕ್ಕಿತು. ಅವರ ಗೌರವಾರ್ಥ 19 ಕುಶಾಲ ತೋಪುಗಳನ್ನು ಹಾರಿಸಲಾಯಿತು.

ಕಲ್ಕತ್ತಾ ಜಿಲ್ಲಾ ನ್ಯಾಯಾಲಯದಲ್ಲಿ ಅಂಪಿಂದ ಘೋಷರ ಪ್ರತಿಮೆ ಇಡಲಾಗುವುದು.

ಭಾರತದ ಪ್ರಧಾನಿ ಪಂ|| ನೆಹರುವಿಗೆ ನಿನ್ನೆ ದಿವಸ ರಂಗೂನಿನಲ್ಲಿ ಅಭೂತಪೂರ್ವ ಸ್ವಾಗತ ಏರ್ಪಾಟಾಗಿತ್ತು. ಬಿನ್ನವತ್ತಳೆಗೆ ಉತ್ತರಿಸುತ್ತಾ ಪಂ|| ನೆಹರು ಪ್ರಪಂಚಕ್ಕೆ ತೀವ್ರ ನಾಶವೇನೂ ಒದಗದಿದ್ದಲ್ಲಿ ಪ್ರಪಂಚ ಏಕಾಧಿಪತ್ಯವಾಗುವುದಂಲ್ಲಿ ಸಂಶಯವಿಲ್ಲ. ಈಗಿನ ದುಡಿಮೆ ಶಾಂತಿಗಾಗಿಯೇ ಅಥವಾ ಸಮರಕ್ಕಾಗಿಯೇ ಎಂಬುದು ನಿರ್ಧರವಾಗಬೇಕಿದೆ. ಜಗತ್ತು ಅಪೇಕ್ಷಿಸೋದು ಶಾಂತಿಯನ್ನ – ಎಂದವರು ನುಡಿದರು.

ಮಿಡ್ತಿ ಕಾಟ ನಿವಾರಣೆಗೆ ಸೌರಾಷ್ಟ್ರ ರೂ. 10 ಸಹಸ್ರ ಮಂಜೂರ್ಮಾಡಿದೆ

ಮೈಸೂರಿನ ಮಾಜಿ ಸೀನಿಯರ್ ಸರ್ಜನ್ ಡಾ|| ಬಿ ಜಯಂತಾಂಬರವರನ್ನು ತಿರುಜನಾಪಳ್ಳಿಯಲ್ಲಿ ಸ್ಥಾಪಿಸಲಿರುವ ಕ್ಷಯರೋಗ ನಿರೋಧ ಕೇಂದ್ರಕ್ಕೆ ಪ್ರಧಾನಾಧಿಕಾರಿಗಳನ್ನಾಗಿ ನೇಮಿಸುವ ಸುದ್ದಿಯಿದೆಯೆಂದು ಬೆಂಗಳೂರಿನಿಂದ ಗೊತ್ತಾಗಿದೆ.

ಬೆಲೂಚಿಸ್ತಾನ್-ಪಾಕೀಸ್ತಾನ ಗಡಿಯಲ್ಲಿ 17 ನೆ ತಾ|| ಪಾಕ್ – ಆಫ್ಘನ್ ಸೇನೆಗಳಿಗೆ ಆಯುಧಗಳಿಂದ ಹೊಡೆದಾಟ ಜರುಗಿತೆಂದು ಕೆಟ್ಟ ವಾರ್ತೆಯೊಂದು ತಿಳಿಸುತ್ತದೆ.

ಪಡಿತರ ರದ್ದು

ಮದರಾಸ್ : ಬರುವ ತಿಂಗಳು 1 ರಿಂದ ಪೆಟ್ರೋಲ್ ಪಡಿತರ ರದ್ದಾಗುತ್ತೆ.

ಅಮೇರಿಕಾದಲ್ಲಿ ಪಾಕಿಸ್ತಾನ ಪ್ರಧಾನಿ ಲಿಯಾಕತ್ ಖಾನ್ ರವರಿಗೆ ಅಧ್ಯಕ್ಷ ಟ್ರೂಮನ್ನರ ಸುಸ್ವಾಗತ

ಊಟಿಯಲ್ಲಿರುವ ಪ್ರಧಾನಿಗಳು

ಬೆಂಗಳೂರು : ಊಟಿಯಲ್ಲಿಯೇ ಇನ್ನೊಂದು ವಾರ ಶ್ರೀ ಕೆ. ಸಿ. ರೆಡ್ಡಿಯವರು ಕ್ಯಾಂಪ್ ಮಾಡುವರೆಂದು ಗೊತ್ತಾಗಿದೆ.

ಸಂಸ್ಥಾನದಲ್ಲಿ ಜನಗಣತಿ

ಬೆಂಗಳೂರು : ಮುಂದಿನ ವರ್ಷ ಫೆಬ್ರವರಿ 9 ರಿಂದ ಮಾರ್ಚಿ 1 ರ ವರೆಗೆ ಮೈಸೂರು ಸಂಸ್ಥಾನದಲ್ಲಿ ಜನಗಣತಿ ನಡೆಯಬೇಕೆಂದು ರಾಜಾಜ್ಞೆ.

ಗವರ್ನರರಿಗೆ ಅನಾರೋಗ್ಯ

ಕಲ್ಕತ್ತ : ಡಾರ್ಜಲಿಂಗಿಗೆ ಪಶ್ಚಿಮ ಬಂಗಾಳ ಗವರ್ನರ್ ಡಾ|| ಕೈಲಾಸನಾಥ ಖಟ್ಜು ತೆರಳಿದರು ಅವರಿಗೆ ಫ್ಲೂ ಆಗಿದೆಯೆಂದು ಗೊತ್ತಾಗಿದೆ

ಕಾಲರಾ ತೀವ್ರವಿದೆ

ಕಾಲರಾ ಹಾವಳಿಯದಲ್ಲಿ ವಿಪರೀತವಾಗಿದೆ.

ಮದರಾಸಿನಲ್ಲಿ ಅರ್ಧ ಲಕ್ಷ ರೂ. ಬೆಲೆಯ ವಜ್ರ ಉತ್ತರ ದೇಶದ ಗಂಡಸು

ತರುಣಿ ಕೊಂದ ಮಗು

ಲೂಯಿಸ್ ಮೇರಿ 10 ವರ್ಷದವಳು. 50 ರೂ. ಬಾಳುವ ಮಾತ್ರ ಆಕೆ ಧರಿಸಿದ್ದಳು. ಆಭರಣ ಆಸೆಗೆ ಸಾವಿತ್ರಿ ಅಮ್ಮಾಳ್ ಎಂಬ 20 ವರ್ಷದವಳು ಮೇರಿಯನ್ನು ಕೊಂದಳೆಂದು ಬಂಧಿಸಲಾಗಿದೆ. ತಂಜಾವೂರು ಸನಿಹದ ಪೂನವಾಸಿ ಗ್ರಾಮದಲ್ಲಿ ನಡೆದ ಘಟನೆ

ಪಾಕಿಸ್ತಾನದ ಪಾಲು

ಇಜಾಮಿರ್ ಅಂತರ್ರಾಷ್ಟ್ರೀಯ ನೋಟ ಆಗಸ್ಟ್ 20 ರಿಂದ ಆರಂಭವಾಗಿ 1 ತಿಂಗಳ ವರೆಗೆ ತರ್ಕಿಯಲ್ಲಿ ಜರುಗುವುದು. ಪಾಕೀಸ್ತಾನ ಪ್ರದರ್ಶನದಲ್ಲಿ ಭಾಗವಹಿಸುವುದು.

ರಷ್ಯ ಒಪ್ಪಿಕೊಂಡಿದೆ

ಪರಮಾಣು ಆಯುಧ ಸಮರ ಬಹಿಷ್ಕಾರವನ್ನು ರಷ್ಯ ಒಪ್ಪಿದೆಯೆಂದು ಮಾಸ್ಕೋ ವಾರ್ತೆ ತಿಳಿಸುತ್ತದೆ.

ಹೆಂಗಸರಿಬ್ಬರ ಬಳಿ ಪಾದ್ರಕ್ಷೇಲಿ ಸಿಕ್ಕಿತೆಂದು ಸುದ್ದಿ ಬಂದಿದೆ.

ಸ್ಮೃತಿಕರ್ತರು ಯಾರು ?

ನಾಲ್ಕು ವೇದಗಳು, ನಾಲ್ಕು ಉಪವೇದಗಳು; ಆರು ಶಾಸ್ತ್ರಗಳು, ಹದಿನೆಂಟು ಪುರಾಣಗಳು, ಉಪ ಪುರಾಣಗಳು ಇತಿಹಾಸಗಳು ಮೊದಲಾದ ಆಷ್ಟಗ್ರಂಥಗಳನ್ನೂ, ದಶ ವಿಧ ನಿಘಂಟುಗಳನ್ನೂ, ಗುರುಕುಲ ವಾಸವನ್ನೂ ಮಾಡಿ, ಧರ್ಮಮೀಮಾಂಸಾದಿಗಳಲ್ಲಿ ಕುಶಲನಾಗಿ, ಸಂಧ್ಯಾವಂದನೆಯನ್ನು ಸಕಾಲದಲ್ಲಿ ಮಾಡುತ್ತಾ, ತಪಸ್ಸು ಮಾಡಿ ಮಹರ್ಷಿತ್ವ ಅಂದರೆ ನಿಗ್ರಹಾನುಗ್ರಹ ಸಮರ್ಥತೆಯನ್ನು ತಡೆದು, ಅಣಿಮಾದಿ ಅಷ್ಟವಿಭೂತಿಗಳನ್ನು ಹೊಂದಿ, ಬ್ರಹ್ಮಚರ್ಯವ್ರತಾನುಷ್ಠಾನಪರರಾಗಿ, ದೇಹರಕ್ಷಣಾರ್ಥವಾಗಿ ಕಂದಮೂಲಗಳನ್ನು ತಿಂದು, ಘಾತಕವನ್ಯಮೃಗಗಳೊಂದಿಗೆ ಸಹವಾಸವನ್ನು ಮಾಡುತ್ತಾ, ಪರ್ಣಶಾಲೆಗಳಲ್ಲಿಯೂ, ಹುಲ್ಲಿನ ಗುಡಿಸಲುಗಳಲ್ಲಿಯೂ, ಗುಹೆಗಳಲ್ಲಿಯೂ ವಾಸಮಾಡುತ್ತಾ, ವ್ಯಾಘ್ರಾಜಿನಗಳನ್ನೂ ಅಂಬರಗಳಾಗಿ ಧರಿಸಿ, ಅಥವಾ ಕೌಪೀನಗಳನ್ನು ಧರಿಸಿ, ವಿಭೂತಿಧಾರಿಗಳಾಗಿ; ಜಟೆಯನ್ನು ಬೆಳೆಸಿ ನಿಸ್ವಾರ್ಥರಹಿತರಾಗಿ, ಪರೋಪಕಾರನಿರತರಾಗಿ ಅಸೂಯಾರಹಿತರಾಗಿ, ಆಸ್ತಿಕರಾಗಿ, ಸಕಲಲೋಕಾರಾಧ್ಯರಾಗಿ, ಮೃತ್ಯುಂಜಯರಾಗಿ ದೇವತೆಗಳಿಗೂ ಗುರುಗಳಾಗಿ ವರ್ತಿಸುವ ಬ್ರಹ್ಮರ್ಷಿಗಳೂ ಎಷ್ಟೊಂದು ಮಹಾಯುಗಗಳ ಕಾಲ ದೇಶವನ್ನು ಪರಿಪಾಲನೆ ಮಾಡಿದ ಸ್ವಾಯಂಭುವು ಮೊದಲಾದ ಮನುಗಳೂ ಸ್ಮೃತಿಕರ್ತರಾಗಿದ್ದಾರೆ; ಇಂಥವರೇ ಸ್ಮೃತಿಕರ್ತರಾಗಿರಬೇಕು. (ತ್ರಿ)

—

ಸ್ಮೃತಿಗಳನ್ನು ಬದಲಾಯಿಸಲು ಚಕ್ರವರ್ತಿಗಳಿಗೆ ಅಧಿಕಾರವಿದೆಯೇ ?

ಹರಿಶ್ಚಂದ್ರಾದಿ ಚಕ್ರವರ್ತಿಗಳಿಗಾಗಲೀ, ಗಯಾಂಬರೀಷಾದಿ ಮಹಾರಾಜರಿಗಾಗಲೀ, ಪುತ್ರ್ಯಾವ ರಾಜರಿಗಾಗಲೀ ಧರ್ಮಶಾಸ್ತ್ರವನ್ನು ಬದಲಾಯಿಸಲು ಅಧಿಕಾರವಿರಲಿಲ್ಲ; ಅವರೆಲ್ಲರೂ ಮನ್ವಾದಿ ಸ್ಮೃತಿಗಳು ತಿಳಿಸಿರುವಂತೆ ಪಾಲಿಸಿದಂತಾಗಲೀ, ತನ್ನ ನಡವಳಿಕೆಗೆ ಅವು ನ್ಯಾತಿರೇಕವಾಗಿರುವುವೆಂದು ಪರಿಪಡಿಸಲು ಹೋಗಲಿಲ್ಲ. ಸಗರನು ಕೆಟ್ಟ ಕಾರ್ಯಗಳನ್ನು ಮಾಡುತ್ತಿದ್ದ ನಿಜಸುತನಾದ ಅಸಮಂಜಸನೆಂಬುವನನ್ನು ಧರ್ಮಶಾಸ್ತ್ರದಲ್ಲಿ ಹೇಳಿರುವಂತೆ ಹೊರಡಿಸಿದನಾಗಲೀ, ತನಗೆ ಅರ್ಹಿಯವಾದ ಕಾರ್ಯವೆಂದು ಧರ್ಮಶಾಸ್ತ್ರದ ಸಮಂಜಸವನು ಕಡೆಗೆ ಗಮನಿಸಿಲಿಲ್ಲ.

ಸೂರ್ಯವಂಶಜನಾದ ಸೂರ್ಯಾರುಣಿ ಎಂಬ ಭೂಪಾಲನು ತನ್ನ ಮಗನು ಭೂಸುರ ಕನ್ಯೆಯನ್ನು ವಿವಾಹ ಮಾಡಿಕೊಂಡಿದ್ದರಿಂದ ಕೋಪಿಸಿಕೊಂಡು ಮನೆಯಿಂದ ಹೊಂಡಿಸಿದನು ಇವನೇ ಸತ್ಯವ್ರತನು ಅಥವಾ ತ್ರಿಶಂಕುವೆಂಬುವನು. ಈತನು ಕೂಡ ಸ್ಮೃತಿಯ ಸಮಯಾದಲ್ಲಿ ವಿಚಿತ್ರ ಮನಸ್ಥಿತಿ

ಇಂಗ್ಲೀಸಿನಲ್ಲಿ ಲೆಟ್ಟಿಪತ್ರ

ಕೌಲಾಲಂಪುರ – ವ್ಯಾಪಾರಿಗಳು ತಮ್ಮ ಎಲ್ಲ ಲೆಕ್ಕಪತ್ರಗಳನ್ನೂ ಇಂಗ್ಲೀಷು ಇಲ್ಲವೇ ರೋಮನ್ ಲಿಪಿಯಲ್ಲಿನ ಮಲಯಾ ಭಾಷೆಯಲ್ಲಿಡಬೇಕೆಂದು ಮಲಯಾ ಸರಕಾರವು ಸೂಚಿಸಿದ್ದರಿಂದ ಹಿಂದಿ, ಪಾಕಿಸ್ತಾನಿ, ಸಿಂಹಳಿ, ಚೀನಿ ಹಾಗೂ ವಿಲಾಯೇತರ ಸಣ್ಣ ಪುಟ್ಟ ವ್ಯಾಪಾರಿಗಳು ತೊಂದರೆಯನ್ನೆದುರಿಸಬೇಕಾಗಿ ಬಂದಿದೆ. ಸರಕಾರದ ಈ ಮೂದೆಗೆ ಬಲವಾದ ವಿರೋಧವನ್ನು ಪ್ರದರ್ಶಿಸಲಾಗಿದೆ.

ಐ. ಟಿ. ಎಲ್. ಗ್ರೈಪ್ ಸಿರಪ್

ನಿಮ್ಮ ಮುದ್ದು ಕಂದನ
ಅಜೀರ್ಣ ವ್ಯಾಧಿಗಳನ್ನು ತಡೆದು
ಆರೋಗ್ಯ ಕಾಪಾಡುವ ಅಮೃತಪಾನ

— ತಯಾರಿಕರು —
ದಿ ಮೈಸೂರು ಇಂಡಸ್ಟ್ರಿಯಲ್ ಅಂಡ್ ಟೆಸ್ಟಿಂಗ್ ಲ್ಯಾಬೊರೇಟರಿ ಲಿಮಿಟೆಡ್
ಮಲ್ಲೇಶ್ವರಂ ಪೋಸ್ಟ್, ಬೆಂಗಳೂರು ೩

ಶ್ರೇಷ್ಠತೆಯ ಹೆಗ್ಗುರುತು

ಐ.ಟಿ.ಎಲ್ ಗ್ರೈಪ್ ಸಿರಪ್

ಧನ್ಯವಾದ

ಜೀವನವಿಮೆಗಾಗಿ ಉಪಯೋಗಿಸಿದ ನಿಮ್ಮ ಧನವು ಬಿಲೆ ದಿನದಿನಕ್ಕೂ ಹೆಚ್ಚುತ್ತದೆ. ಮೂಲಧನವು ಲಾಭಸಹಿತ ಸುರಕ್ಷಿತವಾಗಿ ನಿಮ್ಮ ಕೈ ಸೇರುತ್ತದೆ ಆದುದರಿಂದ ನೀವು ನಿಶ್ಚಿಂತರಾಗಿ ದೀರ್ಘಾಯುಗಳಾಗಿ ಜೀವಿಸಬಹುದು. ಮೈಸೂರು ಸರಕಾರದಲ್ಲಿ ನಿಮೆ ಮಾಡುವುದರಿಂದ ಜೀವಿತದಲ್ಲಿ ಒಮ್ಮೆಸಿದಷ್ಟು ವೆಚ್ಚ ಮಾಡಿ ಅಪೇಕ್ಷಿಸಿದಷ್ಟು ಆಸ್ತಿ ಸಂಪಾದಿಸಿಡಲು, ಒಳ್ಳೆಯ ಅವಕಾಶ ಉಂಟಾಗುತ್ತದೆ.

ಕಳೆದ ಸಾರಿ ಹಂಚಿದ ಬೋನಸ್
ಸಾವಿಂಕ್ಕೆ 18 ರೂಪಾಯಿಗಳು

ಭಾರತದ ಯಾವ ಕಂಪೆನಿಯಲ್ಲೂ
ಇಷ್ಟು ಹೆಚ್ಚು ಬೋನಸ್ ಹಂಚಿಲ್ಲ.

ಇಂದೇ ನಿಮ್ಮ ಮಾಡಿ ! ನಾಳೆ ಎನ ಬೇಡಿ !

ಮೈಸೂರು ಸರ್ಕಾರದ ವಿಮಾ ಇಲಾಖೆ
(ಪ್ರಜೆಗಳ ಶಾಖೆ) ಬೆಂಗಳೂರು ೧.

ವಾಷಿಂಗ್ಟನ್ ನ್ಯಾಷನಲ್ ವಿಮಾನ ನಿಲ್ದಾಣದಲ್ಲಿ ರಾಷ್ಟ್ರಪತಿ ಟ್ರೂಮನ್ ಮತ್ತು ಪ್ರಧಾನಿ ಲಿಯಾಕತ್ ಅಲಿ ಖಾನ್ ಪರಸ್ಪರ ಭಾಷಯ ಅರ್ಪಿಸುತ್ತಿರುವುದು